# ಭಾರತೀಯ ಸಂಸ್ಕೃತಿಯಲ್ಲಿ ಭಾಷೆ, ಸಾಹಿತ್ಯ

ರಮೇಶ್ ಎಸ್.ಎಸ್

ಸಂಸ್ಕೃತಿಗೂ ಭಾಷೆಗೂ ಅನ್ಯೋನ್ಯ ಸಂಬಂಧವಿದೆ. ಒಂದನ್ನು ಬಿಟ್ಟು ಇನ್ನೊಂದಿರಲಾರದು. ಭಾಷೆ ಮತ್ತು ಸಾಹಿತ್ಯ ಇವೆರಡೂ ಶ್ರೇಷ್ಠ ಸಂಸ್ಕೃತಿಯೊಂದನ್ನು ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಹಲವು ಭಾಷೆಗಳಿಂದ ಸಂಪನ್ನವಾದ ಭಾರತದಲ್ಲಿ ಸಾಹಿತ್ಯ ಕೂಡ ಸಮೃದ್ಧವಾಗಿ ಸೃಷ್ಟಿಯಾಗಿದೆ. ಈ ವಿಷಯವನ್ನು ಕುರಿತು ಇಲ್ಲಿ ಬರೆದಿರುವ ಲೇಖಕರು ಮೈಸೂರು ರಾಮಕೃಷ್ಣ ವಿದ್ಯಾಶಾಲೆಯಲ್ಲಿ ಕನ್ನಡ ಅಧ್ಯಾಪಕರಾಗಿದ್ದಾರೆ.

ಭಾರತೀಯ ಸಂಸ್ಕೃತಿ, ಭಾಷೆ ಮತ್ತು ಸಾಹಿತ್ಯ — ಈ ಮೂರು ಪದಗಳು ತುಂಬಾ ವಿಶಾಲ ಅರ್ಥವ್ಯಾಪ್ತಿ ಇರುವ ಪದಗಳು. ಪಶುಪಕ್ಷಿಗಳಿಗೂ ಮತ್ತು ಮನುಷ್ಯನಿಗೂ ಇರುವ ಪ್ರಮುಖವಾದ ವ್ಯತ್ಯಾಸ ಭಾಷೆ, ವಿವೇಚನೆ ಹಾಗೂ ಸಂಸ್ಕೃತಿ. ಹಾಗೆ ನೋಡಿದರೆ ಬೇರೆ ಬೇರೆ ಸಾಮರ್ಥ್ಯಗಳ ನೆಲೆಯಲ್ಲಿ ನೋಡಿದರೆ ಪ್ರಾಣಿಗಳೇ ಬಲಿಷ್ಠವಾದವು. ಕ್ರಿಯಾಕೌಶಲ್ಯ, ಸೌಂದರ್ಯಾನುಭವ, ನೈತಿಕತೆ ಮತ್ತು ಜ್ಞಾನ... ಇವುಗಳ ದೃಷ್ಟಿಯಿಂದ ನೋಡಿದರೆ ಮನುಷ್ಯನಿಗೆ ಸರಿಗಟ್ಟುವ ಜೀವಿಯೇ ಇಲ್ಲ ಎಂದು ಸ್ಪಷ್ಟವಾಗಿ ಹೇಳಬಹುದು. ''ಈ ಮಾನವ ಜೀವಿಯೇ ಸರ್ವಶ್ರೇಷ್ಠವಾದ ಜೀವಿ. ಮಾನವ ಮಾತ್ರ ಪೂರ್ಣಾತ್ಮನಾಗಬಲ್ಲ'' ಎಂಬ ಸ್ವಾಮಿ ವಿವೇಕಾನಂದರ ಉಕ್ತಿ ಚಿಂತನಾರ್ಹವಾದುದು.

ಭಾಷೆಯೆಂದರೆ ಮೊದಲ ಅರ್ಥ ಮಾತು. ಮಾತು ಬಂದ ನಂತರ ಲಿಪಿ. ಎಷ್ಟೋ ಭಾಷೆಗಳಿಗೆ ಲಿಪಿಯೇ ಇಲ್ಲ ಆಡುವ ಮಾತಿನಲ್ಲಿ ಮಾತ್ರ ಉಳಿದಿದೆ. ಸಾಹಿತ್ಯ, ಸಂಸ್ಕೃತಿ, ಶಾಸ್ತ್ರಗಳು, ಹಲವಾರು ಶೈಕ್ಷಣಿಕ ಶಿಸ್ತುಗಳು ಸಾವಿರಾರು ವರ್ಷಗಳಿಂದ ಉಳಿದುಕೊಂಡು ಮುಂದುವರಿಯುತ್ತಿರುವುದಕ್ಕೆ ಲಿಪಿಬದ್ಧವಾದ ಭಾಷೆ ಮುಖ್ಯವಾದ ಕಾರಣ. ಭಾಷೆಯ ಮಹತ್ವದ ಬಗ್ಗೆ ಪ್ರಾಚೀನ ಸಂಸ್ಕೃತ ವಿದ್ವಾಂಸ ದಂಡಿ ಹೇಳಿರುವ ಮಾತು ಸಾರ್ವಕಾಲಿಕ ಸತ್ಯವಾದುದು. ಆತ ಹೇಳಿದ್ದು, ''ಭಾಷೆಯೆಂಬ ಬೆಳಕು ಜೀವನದ ಉದ್ದಕ್ಕೂ ಬೆಳಗದಿದ್ದರೆ ಲೋಕವೆಲ್ಲವೂ ಕತ್ತಲಿನಿಂದ ತುಂಬಿ ಹೋಗುತ್ತಿತ್ತು.''

ಸಮೂಹದ ಸೃಷ್ಟಿಯಾಗಿರುವ ಜನಪದ ಸಾಹಿತ್ಯವಾಗಲಿ ಅಥವಾ ಶಿಷ್ಟಸಾಹಿತ್ಯವಾಗಲಿ ಸಂಭವಿಸುವುದು ಭಾಷೆಯಲ್ಲಿಯೇ. ಭಾರತೀಯ ಸಂಸ್ಕೃತಿಯಲ್ಲಿ ಭಾಷೆ ಎಂಬ ವಿಷಯದ ಬಗ್ಗೆ, ಪ್ರಾಚೀನವಾದ ಸಂಸ್ಕೃತ ಭಾಷೆಯನ್ನು ಬಿಟ್ಟು ಮಾತನಾಡುವುದು ಸಾಧ್ಯವೇ ಇಲ್ಲ. ಸ್ವಾಮಿ ವಿವೇಕಾನಂದರು, ಡಾ. ಬಿ.ಆರ್.ಅಂಬೇಡ್ಕರ್, ಪಂಡಿತ್ ಜವಹರಲಾಲ್ ನೆಹರು, ಡಾ. ರಾಧಾಕೃಷ್ಣನ್... ಈ ಎಲ್ಲಾ ಮಹನೀಯರು ಸಂಸ್ಕೃತ ಭಾಷೆಯ ಮಹತ್ವವನ್ನು ಚೆನ್ನಾಗಿ ಅರ್ಥಮಾಡಿಕೊಂಡಿದ್ದರು. ಭಾರತ ಹಲವು ಭಾಷೆ ಹಾಗೂ ಉಪಭಾಷೆಗಳಿರುವ ವಿಶಿಷ್ಟವಾದ ಶ್ರೀಮಂತ ರಾಷ್ಟ್ರ. ಭಾರತೀಯ ಸಂಸ್ಕೃತಿಯಲ್ಲಿನ ಭಾಷೆಯ ಬಗ್ಗೆ ಮಾತನಾಡುವಾಗ ಗುಡ್ಡಗಾಡಿನ ಜನರಾಡುವ ಭಾಷೆಯನ್ನೂ ನಿರ್ಲಕ್ಷಿಸುವಂತಿಲ್ಲ. ಆಧುನಿಕ ಶೈಕ್ಷಣಿಕ ಶಿಸ್ತುಗಳಲ್ಲಿ ಭಾಷಾ ಶಾಸ್ತ್ರಕ್ಕೆ ಹೆಚ್ಚಿನ ಮಹತ್ವವಿದೆ. ಸಾಹಿತ್ಯದಲ್ಲಿರುವ ಭಾಷೆ ಯನ್ನು ಅಧ್ಯಯನ ಮಾಡುವ ಶಾಸ್ತ್ರವೇ ಶೈಲಿಶಾಸ್ತ್ರ (Styltistics).

ಇಡೀ ವಿಶ್ವದಲ್ಲೇ ಅನನ್ಯವಾದ, ಶ್ರೀಮಂತವಾದ ಹಾಗೂ ಭವ್ಯವಾದ ಸಂಸ್ಕೃತಿ ಎಂದರೆ ಅದು, 'ಭಾರತೀಯ ಸಂಸ್ಕೃತಿ'. ಇದು ಕೇವಲ ಅಭಿಮಾನದ ಮಾತಲ್ಲ. ಸುದೀರ್ಘ ಅಧ್ಯಯನ ಮಾಡಿದ ವಿದ್ವಾಂಸರು ಹೇಳಿರುವ ಸತ್ಯಾಂಶ. ಭಾರತೀಯ ಸಂಸ್ಕೃತಿಯಲ್ಲಿ ಭಾಷೆಗಿರುವ ಮಹತ್ವವನ್ನು ನಮ್ಮ ಕವಿಗಳು ಸಾಹಿತಿಗಳು ತಮ್ಮ ಕೃತಿಗಳಲ್ಲಿ ಸ್ಪಷ್ಟವಾಗಿ ವ್ಯಕ್ತಗೊಳಿಸಿದ್ದಾರೆ. ಅನುಭವ ಮಂಟಪದ ಅಧ್ಯಕ್ಷನಾಗಿದ್ದ, ಅಲ್ಲಮಪ್ರಭು ಭಾಷೆಯ ಬಗ್ಗೆ ಹೇಳಿರುವ ಸೊಗಸಾದ ವಚನ:

ಮಾತೆಂಬುದು ಜ್ಯೋತಿರ್ಲಿಂಗ
ಸ್ವರವೆಂಬುದು ಪರತತ್ತ್ವ
ತಾಳೋಷ್ಠ ಸಂಪುಟವೆಂಬುದು ನಾದಬಿಂದು ಕಳಾತೀತ
ಗುಹೇಶ್ವರನ ಶರಣರು ನುಡಿದು ಸೂತಕಿಗಳಲ್ಲ
— ಕೇಳಾ ಮರುಳೆ.

ಇಡೀ ಭಾರತೀಯ ಸಮಾಜದಲ್ಲಿ ನಮ್ಮ ಕನ್ನಡನಾಡಿನಲ್ಲಿ, ೧೨ನೆಯ ಶತಮಾನದಲ್ಲಿ ನಡೆದ ವಚನಕಾರರ ಆಂದೋಲನ ಗಮನಾರ್ಹವಾದುದು. ವಚನ ಸಾಹಿತ್ಯದ ಕೇಂದ್ರ ವ್ಯಕ್ತಿ ಭಕ್ತಿ ಭಂಡಾರಿ ಬಸವಣ್ಣನವರು. ಅವರು ಜನರಾಡುವ ಮಾತಿನ ಬಗ್ಗೆ ಹೇಳಿರುವ ವಚನ ಜನಪ್ರಿಯವೂ ಹೌದು, ಹಾಗೆಯೇ ಅರ್ಥಪೂರ್ಣವೂ ಹೌದು.

ನುಡಿದರೆ ಮುತ್ತಿನ ಹಾರದಂತಿರಬೇಕು
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು
ನುಡಿದರೆ ಸ್ಫಟಿಕದ ಸಲಾಕೆಯಂತಿರಬೇಕು
ನುಡಿದರೆ ಲಿಂಗಮೆಚ್ಚಿ 'ಅಹುದಹುದೆ'ನ ಬೇಕು
ನುಡಿಯೊಳಗಾಗಿ ನಡೆಯದಿದ್ದರೆ
ಕೂಡಲ ಸಂಗಮದೇವನೆಂತೊಲಿವನಯ್ಯಾ ?

ಬೆಲೆಬಾಳುವ, ಸುಂದರವಾದ ಮುತ್ತಿನ ಹಾರದಂತಿರಬೇಕು ಮಾತು, ಮಾತು ಮಾಣಿಕ್ಯದ ದೀಪ್ತಿಯಂತೆ ಜ್ಞಾನವನ್ನು, ಅರಿವನ್ನು ನೀಡಬೇಕು. ಸ್ಪಷ್ಟತೆಯಿಂದ ಕೂಡಿರಬೇಕು ನಾವಾಡುವ ಮಾತು. (ಸ್ಫಟಿಕದ ಸಲಾಕೆ) ನಮ್ಮ ಮಾತು ಹೇಗಿರಬೇಕು ಎಂಬುದನ್ನು ಸುಂದರವಾದ ಮೂರು ಪ್ರತಿಮೆಗಳ ಮೂಲಕ ಬಸವಣ್ಣನವರು ಇಲ್ಲಿ ಹೇಳಿದ್ದಾರೆ. ಈ ವಚನದ ಕೊನೆಯ ಸಾಲುಗಳಲ್ಲಿ ಭಾರತೀಯ ಸಂಸ್ಕೃತಿಯ ಶ್ರೇಷ್ಠವಾದ ಸಂದೇಶ ಮನಮುಟ್ಟುವಂತೆ ವ್ಯಕ್ತಗೊಂಡಿದೆ.

ಮಾತು ವ್ಯವಹಾರದ ಸರಕಾಗಬಾರದು. ನಮ್ಮ ಮಾತು ಕೇಳಿದವರ ಮೆಚ್ಚಿಗೆ ಪಡೆದರೆ ಸಾಲದು. ಲೋಕದ ಒಡೆಯನಾದ ಆ ಪರಮೇಶ್ವರ ಸಹ ನಮ್ಮ ಮಾತಿಗೆ ಸಮ್ಮತಿ ತೋರಬೇಕು. ಇಲ್ಲಿ ನೆನಪಿಡಬೇಕಾದ ಸಂಗತಿಯೆಂದರೆ ಬಣ್ಣದ ಜೊಳ್ಳಿನ ಮಾತುಗಳ ಮೂಲಕ ಶಿವಾನುಗ್ರಹ ಸಾಧ್ಯವಿಲ್ಲ. ಎಲ್ಲ ಕಾಲ-ದೇಶಗಳಿಗೆ ಅನ್ವಯವಾಗುವ ಸಂದೇಶ ಮಾತು ಮತ್ತು ಕ್ರಿಯೆಗಳ (ನಡೆನುಡಿಗಳ) ನಡುವೆ ಅಂತರವಿರಬಾರದು. ನಾವು ಈ ಲೋಕದಲ್ಲಿ ಆಡಿದಂತೆ ಮಾಡಿದರೆ ಸಹಜವಾಗಿಯೇ ಮೌಲ್ಯಗಳು ಜೀವಂತವಾಗಿರುತ್ತವೆ. (ನುಡಿಯೊಳಗಾಗಿ ನಡೆಯದಿದ್ದರೆ ಎಂದರೆ, ಮಾತು ಸತ್ಯವಾಗಿರಬೇಕು ಎಂದರ್ಥ.)

ನಮ್ಮ ಭವ್ಯವಾದ ಭಾರತೀಯ ಸಂಸ್ಕೃತಿಯಲ್ಲಿ ಭಾಷೆ ಎಂದರೆ ಮಾತು ಹೇಗಿರಬೇಕು ಎಂದು ಹೇಳಿದ ಜೊತೆಗೆ, ತಾವು ಹೇಳಿದಂತೆ ಬಾಳಿ ಸಮಾಜಕ್ಕೆ ಆದರ್ಶವಾಗಿದ್ದವರು ಬಸವೇಶ್ವರರು.

ಭಾರತೀಯ ಸಂಸ್ಕೃತಿಯಲ್ಲಿ ಭಾಷೆ, ಸಾಹಿತ್ಯಗಳ ಬಗ್ಗೆ ವಿಚಾರ ಮಾಡುತ್ತಿರುವಾಗ ಕನ್ನಡ ಭಾಷೆಗೆ ಮಾತ್ರ ಸೀಮಿತವಾಗುವುದರಿಂದ ಲೇಖನ ಪೂರ್ಣತೆ ಪಡೆಯುವುದಿಲ್ಲ. ನನಗೆ ತೀರ ಪರಿಚಿತವಾದ ಭಾಷೆ ಸಾಹಿತ್ಯಗಳ ಮೂಲಕ ಭಾರತೀಯ ಸಂಸ್ಕೃತಿಯ ಹಿರಿಮೆಗರಿಮೆಗಳನ್ನು ಹಂಚಿಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದೇನೆ.

ಭಾರತೀಯ ಸಂಸ್ಕೃತಿಯಲ್ಲಿ ಭಾಷೆಯನ್ನು ಕುರಿತು ಮಾತಾಡುವಾಗ ಜನಸಾಮಾನ್ಯರ ನಡುವೆ ಒಬ್ಬನಾಗಿ, ತನ್ನ ತ್ರಿಪದಿಗಳ ಮೂಲಕ ಮನೆಮಾತಾಗಿರುವ ಸರ್ವಜ್ಞನನ್ನು ಮರೆಯಲಾಗದು.

ಮಾತಿನಿಂ ನಗೆ ನುಡಿಯು ಮಾತಿನಿಂ ಹಗೆ ಕೊಲೆಯು
ಮಾತಿನಿಂ ಸರ್ವ ಸಂಪದವು ಲೋಕಕ್ಕೆ
ಮಾತೆ ಮಾಣಿಕ್ಯವು ಸರ್ವಜ್ಞ

ಭಾಷೆಯೆಂಬುದು ನಮ್ಮ ಬದುಕಿನ ಅವಿಭಾಜ್ಯ ಅಂಗ. ಭಾಷೆಯ ವಿಶಿಷ್ಟವಾದ ಅಭಿವ್ಯಕ್ತಿ ಸಾಹಿತ್ಯ ಕ್ಷೇತ್ರದಲ್ಲಿ ನೋಡುವಂತೆ ವಿಭಿನ್ನ ಶಾಸ್ತ್ರಗಳಲ್ಲಿಯೂ ನೋಡುವ ಪರಿಪಾಠವಿದೆ.

ಭಾರತೀಯ ಸಂಸ್ಕೃತಿಯ ಮುಖ್ಯ ಭಾಗವೇ ಆಗಿರುವ ಸಾಹಿತ್ಯ ಹಾಗೂ ಅದರ ಪರಂಪರೆಯ ಬಗ್ಗೆ ಸಂಕ್ಷಿಪ್ತವಾಗಿ ಹೇಳುವುದು ಒಂದು ಸವಾಲು. ಅಗಾಧವಾದ ಭಾರತೀಯ ಸಾಹಿತ್ಯ ಪರಂಪರೆಯ ಸಮಗ್ರವಾದ ಅಧ್ಯಯನ ಸಾಧ್ಯವೇ ಎನ್ನುವ ಪ್ರಶ್ನೆ ಎದುರಾಗುತ್ತದೆ.

ಭಾರತೀಯ ಸಂಸ್ಕೃತಿಯಲ್ಲಿ ಸಾಹಿತ್ಯದ ಬಗ್ಗೆ ವಿಚಾರ ಮಾಡುವಾಗ ರಾಮಾಯಣ ಮತ್ತು ಮಹಾಭಾರತ ಮಹಾಕಾವ್ಯಗಳನ್ನು ಬಿಟ್ಟು ಮುಂದೆ ಹೋಗಲು ಸಾಧ್ಯವೇ ಇಲ್ಲ. ಇಡೀ ಭಾರತೀಯ ಸಾಂಸ್ಕೃತಿಕ ಪರಂಪರೆಯ ಎರಡು ಕಣ್ಣುಗಳಾದ ರಾಮಾಯಣ ಮತ್ತು ಮಹಾಭಾರತ ಕಾವ್ಯಗಳ ಬಗ್ಗೆ ಅವರು ಅಂತಿಮ ಎಂದು ಹೇಳಬಹುದಾದ ಮಾತುಗಳನ್ನು ವೇದಾಂತ ಕೇಸರಿ ಸ್ವಾಮಿ ವಿವೇಕಾನಂದರು ಹೀಗೆ ಹೇಳಿದ್ದಾರೆ: ''ರಾಮಾಯಣ ಮತ್ತು ಮಹಾಭಾರತದಲ್ಲಿ ಬರುವ ನೂರಾರು ಪಾತ್ರಗಳು ಸಾವಿರಾರು ವರ್ಷಗಳಿಂದ ಹಿಂದೂಗಳಿಗೆ ಸಂಸ್ಕೃತಿಯ ಪುಣ್ಯನಿಧಿಯಾಗಿವೆ. ಇವೇ ಅವರ ಭಾವನೆ, ನೀತಿ ಧರ್ಮಗಳಿಗೆ ಮೂಲವಾಗಿವೆ. ರಾಮಾಯಣ ಮಹಾಭಾರತ ಗಳೆರಡೂ ಪುರಾತನ ಆರ್ಯರ ಜೀವನ ಮತ್ತು ಧರ್ಮವನ್ನು ವಿವರಿಸುವ ವಿಶ್ವಕೋಶಗಳಾಗಿವೆ. ಮಾನವಕೋಟಿ ಇನ್ನೂ ಸಾಧಿಸಬೇಕಾಗಿರುವ ಆದರ್ಶವನ್ನು ಇವು ಚಿತ್ರಿಸುತ್ತವೆ.''

ವಾಲ್ಮೀಕಿ ಮಹರ್ಷಿಯ ರಾಮಾಯಣ ಮತ್ತು ವೇದವ್ಯಾಸರ ಮಹಾಭಾರತ ಭಾರತದ ಎಲ್ಲಾ ಭಾಷೆ ಹಾಗೂ ಉಪಭಾಷೆಗಳಲ್ಲಿ ಪ್ರಕಟಗೊಂಡಿವೆ. ಈ ಮಹಾಕಾವ್ಯಗಳ ಕಥೆಯನ್ನು ಹೇಳಿದ ಬೇರೆ ಕವಿಗಳು ಅನುವಾದ ಕಾರ್ಯಕ್ಕೆ ತೊಡಗದೆ, ತಮ್ಮ ಸೃಜನಶೀಲ ಪ್ರತಿಭೆಯಿಂದ ಮರುಸೃಷ್ಟಿ ಮಾಡಿದ್ದಾರೆ. ಕನ್ನಡದಲ್ಲಿ ಪಂಪ, ರನ್ನ, ಕುಮಾರವ್ಯಾಸ.... ಮುಂತಾದ ಕವಿಗಳ ನೈಜ ಪ್ರತಿಭೆ ಮನವರಿಕೆಯಾಗುವುದು.

ಭಾರತೀಯ ಸಂಸ್ಕೃತಿಯಲ್ಲಿ ವೈವಿಧ್ಯತೆ ಇದ್ದರೂ ಕೆಲವು ನೈತಿಕ ಮೌಲ್ಯಗಳ ಪ್ರತಿಪಾದನೆಯಲ್ಲಿ ಒಮ್ಮತವಿದೆ. ಭಗವದ್ಗೀತೆ ಇಡಿ ಭಾರತೀಯ ಸಂಸ್ಕೃತಿಯ ಮೇಲೆ ಸ್ಪಷ್ಟ ಪ್ರಭಾವ ಬೀರಿರುವ ಜೊತೆಗೆ, ವಿಶ್ವದ ದರ್ಶನಶಾಸ್ತ್ರ ಪರಂಪರೆಯಲ್ಲಿ ವಿಶಿಷ್ಟವಾದ ಸ್ಥಾನ ಪಡೆದಿದೆ. ಸ್ವಾಮಿ ವಿವೇಕಾನಂದರ ಪ್ರಕಾರ ''ಭಗವದ್ಗೀತೆಯನ್ನು ಓದದೇ ಶ್ರೀಕೃಷ್ಣನನ್ನು ಪೂರ್ತಿಯಾಗಿ ಅರ್ಥ ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ.'' ಅಲ್ಲದೆ ಸ್ವಾಮೀಜಿಯವರ ಪ್ರಕಾರ ''ಇಡೀ ಗೀತಾಸಂದೇಶವಾದ, ಎಲೈ ಅರ್ಜುನ ಹೇಡಿಯಾಗ ಬೇಡ ಇದು ನಿನಗೆ ಯೋಗ್ಯವಲ್ಲ. ಎಲೈ ಶತ್ರುತಾಪನನೆ, ತುಚ್ಛವಾದ ಮನಸ್ಸಿನ ದೌರ್ಬಲ್ಯವನ್ನು ಬಿಟ್ಟು ಏಳು'' ಎಂಬ ಈ ಹೇಳಿಕೆ, ಸ್ಪರ್ಧಾತ್ಮಕ ಜಗತ್ತಿಗೆ ಸಂಜೀವಿನಿಯಂತಿದೆ. ಇದೇ ಭಾರತೀಯ ಸಂಸ್ಕೃತಿ.

ಕನ್ನಡನಾಡಿನ ಶ್ರೇಷ್ಠ ವಿದ್ವಾಂಸರಲ್ಲಿ ಒಬ್ಬರಾಗಿದ್ದ ಶ್ರೀ. ಎ.ಆರ್. ಕೃಷ್ಣಶಾಸ್ತ್ರೀ ಅವರ 'ವಚನ ಭಾರತ' ಕನ್ನಡಿಗರ ಅಚ್ಚುಮೆಚ್ಚಿನ ಗ್ರಂಥ. ಪ್ರೊ. ಕೃಷ್ಣಶಾಸ್ತ್ರೀ ಅವರು ವಿದ್ವತ್ ಲೋಕ

ದಲ್ಲಿಯೇ ಅಗ್ರಸ್ಥಾನದಲ್ಲಿದ್ದ ಪ್ರೊ. ಎಂ. ಹಿರಿಯಣ್ಣ ಅವರಿಗೆ ವಚನ ಭಾರತ ಅರ್ಪಿಸಿದಾಗ ಅವರು ಹೇಳಿದ ಮಾತು ಎಷ್ಟು ಸೊಗಸಾಗಿದೆ ನೋಡಿ: ''ಮಹಾಭಾರತದಲ್ಲಿ ಭಾರತೀಯ ಸಂಸ್ಕೃತಿಯನ್ನೆಲ್ಲಾ ಒಂದು ಉಂಡೆಯಾಗಿ ನೋಡಬಹುದು.''

ಈಗ ಪ್ರಸ್ತುತ ಸಮಾಜದಲ್ಲಿ ಸಂಸ್ಕೃತಿ ಎನ್ನುವ ಪದ ವಿಚಿತ್ರ ಸನ್ನಿವೇಶಗಳಲ್ಲಿ ಪ್ರಯೋಗವಾಗುತ್ತಿರುವುದು ದುರಂತದ ಸಂಗತಿ. ಸಂಸ್ಕೃತಿ ಬೇರೆ ನಾಗರಿಕತೆ ಬೇರೆ. ಇವುಗಳ ನಡುವಿನ ಅರ್ಥ ವ್ಯತ್ಯಾಸ ಹೇಳುವ ಪ್ರಸಿದ್ಧ ಹೇಳಿಕೆ ಹೀಗಿದೆ ''ನಾವೇನಾಗಿರುವೆವೋ ಅದು ಸಂಸ್ಕೃತಿ ಮತ್ತು ನಾವು ಏನು ಪಡೆದಿರುವೆವೊ ಅದು ನಾಗರಿಕತೆ.'' ಜ್ಞಾನದ ರಾಶಿ, ಮಾಹಿತಿಗಳ ರಾಶಿ ಸಂಸ್ಕೃತಿಯಲ್ಲ, ಸಾರ್ಥಕವಾಗಿ ಬದುಕುವ ವ್ಯಕ್ತಿಯ ಪ್ರತಿನಡೆ-ನುಡಿಯಲ್ಲಿ ಸಂಸ್ಕೃತಿಯ ಜೀವಂತಿಕೆಯನ್ನು ನಾವು ನೋಡಲು ಸಾಧ್ಯ.

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಮೊಟ್ಟಮೊದಲ ಲಕ್ಷಣ ಗ್ರಂಥವಾದ 'ಕವಿರಾಜಮಾರ್ಗ'ದಲ್ಲಿ ಬಂದಿರುವ ಈ ಬೆಲೆಯುಳ್ಳ ನುಡಿಯನ್ನು ನೋಡಿ:

ಕಸವರವೆಂಬುದು ನೆರೆ ಸೈರಿಸಲಾರ್ಪೊಡೆ
ಪರವಿಚಾರಮುಮಂ ಪರಧರ್ಮಮುಮಂ

ಕಸವರ ಎಂದರೆ ಚಿನ್ನ ಎಂದರ್ಥ. ಪರಧರ್ಮ ಮತ್ತು ಪರವಿಚಾರಗಳನ್ನು ಸಹಿಸುವ ಮನಸ್ಸೇ ನಿಜವಾದ ಬಂಗಾರ ಅಂದರೆ ಸಂಪತ್ತು. ಇದು ಭಾರತೀಯ ಸಂಸ್ಕೃತಿಯಲ್ಲಿರುವ ಘನವಾದ ಸಂದೇಶ.

ಯಾವುದೇ ಕವಿಯಾಗಿರಬಹುದು, ಸಾಹಿತಿಯಾಗಿರಬಹುದು ಸಮಕಾಲೀನ ಸಂಗತಿಗಳಿಗೆ ಸ್ಪಂದಿಸುವುದು ತೀರ ಸಾಮಾನ್ಯ ಸಂಗತಿ. ಸಹಜವಾಗಿಯೇ ಸಾಹಿತ್ಯ ಕೃತಿಗಳಲ್ಲಿ ಭಾರತೀಯ ಸಂಸ್ಕೃತಿ ಪ್ರತಿಫಲನವಾಗಿರುತ್ತದೆ. ಬಹುಮುಖವಾದ ಭಾರತೀಯ ಸಂಸ್ಕೃತಿ, ಭಾರತೀಯ ಭಾಷೆಗಳಲ್ಲಿ ಸಾವಿರಾರು ವರ್ಷಗಳಿಂದ ಅವ್ಯಾಹತವಾಗಿ ಹರಿದು ಬರುತ್ತಿದೆ. ಸಂಸ್ಕಾರಗೊಂಡ ಮನುಷ್ಯ ಪ್ರಕೃತಿಯನ್ನು ಸಂಸ್ಕೃತಿಯನ್ನಾಗಿ ಪರಿವರ್ತಿಸುತ್ತಾನೆ. ಜವಾಬ್ದಾರಿ ಹಾಗೂ ಬದ್ಧತೆ ಇರುವ ಲೇಖಕ ಪ್ರಕೃತಿಯನ್ನು ವಿಕೃತಿಗೊಳಿಸಲಾರ.

ಭಾರತೀಯ ಸಂಸ್ಕೃತಿ ಧರ್ಮಶ್ರದ್ಧೆಯ ಜೊತೆಗೆ ಸಾರುವ ಮುಖ್ಯ ಸಂದೇಶ ವ್ಯಕ್ತಿಯ ವೈಯಕ್ತಿಕ ನೈತಿಕ ಮೌಲ್ಯಗಳನ್ನು ಕುರಿತು. ಪ್ರತಿಯೊಬ್ಬ ವ್ಯಕ್ತಿಯೂ ಮೌಲ್ಯಗಳನ್ನು ವಿಶ್ವಾಸದಿಂದ ನೋಡಿ ನಡೆದರೆ ಸಮಾಜದ ಸಂಸ್ಕೃತಿ ಶ್ರೀಮಂತವಾಗುತ್ತದೆ. ಬಾಹ್ಯ ಆಚರಣೆಗಳಿಗಿಂತ ವ್ಯಕ್ತಿಯ ನೈತಿಕ ನಿಷ್ಠೆ ಎಂಬ ಅಂಶ ಮುಖ್ಯ ಎಂದು ಭಾರತೀಯ ಸಂಸ್ಕೃತಿ ಒತ್ತಿ ಹೇಳುತ್ತದೆ.

ದಾಸಶ್ರೇಷ್ಠರಾದ ಶ್ರೀ ಪುರಂದರದಾಸರ ಕೀರ್ತನೆಯ ಕೆಲ ಸಾಲುಗಳನ್ನು ನೋಡಿ:

ಕುಟಿಲವ ಬಿಡದಿಹ ಕುಜನರು ಮಂತ್ರವ
ಪಠನೆಯ ಮಾಡಿದರೆನು ಫಲ
ಸಟೆಯನ್ನಾಡುವ ಮನುಜರು ಮನದಲಿ
ವಿಠಲನ ನೆನೆದರೆ ಏನು ಫಲ

ಮಾತಾಪಿತೃಗಳ ಬಳಲಿಸುವಾತನು
ಯಾತ್ರೆಯ ಮಾಡಿದರೇನು ಫಲ
ಘಾತಕತನವನು ಬಿಡದೆ ನಿರಂತರ
ಗೀತೆಯನೋದಿದರೇನು ಫಲ

ಭಾರತೀಯ ಸಂಸ್ಕೃತಿ ಪ್ರತಿಯೊಬ್ಬ ಭಾರತೀಯನ ದೈನಂದಿನ ಜೀವನದಲ್ಲಿ ಸುಸ್ಪಷ್ಟವಾಗಿ ವ್ಯಕ್ತವಾಗಬೇಕಾದರೆ ಶ್ರೀ ಸ್ವಾಮಿ ವಿವೇಕಾನಂದರು ಇಡಿ ಮಾನವ ಲೋಕಕ್ಕೆ ಕೊಟ್ಟಿರುವ ಮಹಾಮಂತ್ರ : ''ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ''(ಸ್ವಂತ ಮುಕ್ತಿಗಾಗಿ ಸಾಧನೆ ಮಾಡುವುದರ ಜೊತೆ ಜೊತೆಗೆ ಜಗತ್ತಿನ ಹಿತಕ್ಕಾಗಿಯೂ ದುಡಿಯಬೇಕು). ಇದು ಆದರ್ಶವಾಗಬೇಕು ಅನುಷ್ಠಾನಗೊಳ್ಳಬೇಕು. ❁

## ನೆಲೆ ತಪ್ಪಿದವರಿಗೆ ಭಾರತದ ಸುಸ್ವಾಗತ

ನೆಲೆ ತಪ್ಪಿ ಭಾರತಕ್ಕೆ ಬಂದ ಇತರ ಧರ್ಮವರಿಗೂ ಜನಾಂಗದವರಿಗೂ ಇಲ್ಲಿನ ಆಳರಸರು ಮತ್ತು ಜನತೆ ನೀಡಿದ ಸತ್ಕಾರವು ಭಾರತದ ಸಂಸ್ಕೃತಿಯ ಅತ್ಯಂತ ಭವ್ಯ ಮುಖಗಳಲ್ಲಿ ಒಂದು. ತಮ್ಮ ಸ್ವಂತ ದೇಶಗಳಲ್ಲಿಯೇ ಅಪಾರ ಹಿಂಸೆಗೆ ಒಳಗಾಗಿ, ತಮ್ಮ ದೇವಸ್ಥಾನಗಳೆಲ್ಲ ನಾಶವಾಗಿ, ತಮ್ಮ ಮತಬಾಂಧವರು ಸಾಮೂಹಿಕ ಕಗ್ಗೊಲೆಗೆ ಒಳಗಾಗಿ ಪ್ಯಾಲಸ್ಟೈನಿನ ಯಹೂದಿಗಳೂ, ಇರಾನಿನ ಪಾರ್ಸಿಕರೂ ಭಾರತೀಯರ ಪರಮತಸಹಿಷ್ಣುತೆ ಮತ್ತು ಅತಿಥಿಸತ್ಕಾರಗಳ ಪರಂಪರೆಯಲ್ಲಿ ನಂಬಿಕೆಯಿಟ್ಟು ರಕ್ಷಣೆಯನ್ನು ಅರಸುತ್ತಾ ಇಲ್ಲಿಗೆ ಬಂದರು. ಇಲ್ಲಿ ಅವರ ನಿರೀಕ್ಷೆ ಮತ್ತು ಆಶೋತ್ತರಗಳು ನೆನೆದಂತೆಯೇ ಕೈಗೂಡಿದವು. ಏಕೆಂದರೆ ಭಾರತವು ಅವರನ್ನು ಆದರ ಗೌರವಗಳಿಂದ ಸ್ವಾಗತಿಸಿತು. ಅಂದಿನಿಂದ ಅದು ಅವರನ್ನೂ ಅವರ ಧರ್ಮಗಳನ್ನೂ ಸಂರಕ್ಷಿಸಿಕೊಂಡು ಬಂದಿದೆ. ಸ್ವಾಮಿ ವಿವೇಕಾನಂದರು ೧೮೯೩ನೇ ಸೆಪ್ಟೆಂಬರ್ ೧೧ರಂದು ಚಿಕಾಗೋ ಧರ್ಮಸಮ್ಮೇಳನದಲ್ಲಿ ತಮ್ಮ ಪ್ರಾರಂಭ ಭಾಷಣ ಮಾಡುತ್ತಾ ಭಾರತ ಇತಿಹಾಸದಲ್ಲಿಯೇ ಅಲ್ಲ ಇಡೀ ಮಾನವ ಇತಿಹಾಸದಲ್ಲಿಯೇ ಅತ್ಯಂತ ಭವ್ಯವಾದ ಈ ಪ್ರಕರಣವನ್ನು ಕುರಿತು ಸ್ಮರಣಯೋಗ್ಯವಾದ ರೀತಿಯಲ್ಲಿ ಹೇಳಿದ್ದಾರೆ.

*— ಸ್ವಾಮಿ ರಂಗನಾಥಾನಂದ, 'ಪರಿವರ್ತನಶೀಲ ಸಮಾಜಕ್ಕೆ ಶಾಶ್ವತ ಮೌಲ್ಯಗಳು', ಸಂಪುಟ ೧, ಪು.೨೫*